ಅಜ್ಜಿಗೆ ಏಳು ಜನ ಹೆಣ್ಣುಮಕ್ಕಳು, ಇಬ್ಬರು ಗಂಡುಮಕ್ಕಾಗಿದ್ದರೂ ಏನು ಪ್ರಯೋಜನವಿಲ್ಲವೆಂದು ಅವಳೆ ಗೊಣಗುತ್ತಿದ್ದಳು. ಆಷಾಢಕ್ಕೆ ಬಂದ ಮಕ್ಕಳ ನೋಡಿ ಖುಷಿಯಿಂದ ಅವರಿಗೆ ಏನು ಬೇಕೋ ಅದನೆಲ್ಲ ಮಾಡುವುದರಲ್ಲಿಯೇ ಏನೋ ಖುಷಿ ಅವಳಿಗೆ. ಅಷ್ಟೆಲ್ಲ ಕಜ್ಜಾಯ ಮಾಡಿದ್ದರೂ ಒಂದನ್ನು ತಿನ್ನುವುದಕ್ಕೂ ಆಗದೆ ಮಕ್ಕಳ ಆಗುಹೋಗುಗಳ ಬಗ್ಗೆ ರಾತ್ರಿಯಿಡಿ ಮಾತನಾಡುತ್ತಾ, ಒಬ್ಬೊಬ್ಬರಾಗಿ ನಂಗೆ ಸೀರೆ ಬೇಕು, ಕಾಸಿನ ಸರ ಮಾಡ್ಸು, ಕಿವಿಗೆ ಬೆಂಡೋಲೆ ಕೊಡ್ಸು, ನೋಡಮ್ಮ ನನ್ನ ಕಾಲಿಗೆ ಚೈನು ಇಲ್ಲ, ಕೈಗೆ ಬಳೆಗಳು ಇಲ್ಲ, ಮೂಗಿಗೆ ಮೂಗ್ಬಟ್ಟು ಇಲ್ಲ ಎಂದೆಲ್ಲ ಹೇಳಲು ಶುರುಮಾಡಿದ ಮೇಲೆ ಅಜ್ಜಿಗೆ ನಿದ್ದೆಯೇ ಬರುತಿರಲಿಲ್ಲ! ಕುರಿಕಂಬಳಿಯ ಹೊದ್ದುಕೊಂಡು ಅತ್ತಿಂದಿತ್ತ ಒದ್ದಾಡಿ ರಾತ್ರಿಯೆಲ್ಲ ಕಣ್ಣೀರಿನಿಂದಲೇ ಕೈತೊಳೆದು ಬೆಳ್ಗೆ ಅಟ್ಟಿ ಬಾಕ್ಲ ತೊಳೆದು ರಂಗೋಲೆಯಿಟ್ಟು, ಕೊಟ್ಟಿಗೆಯ ಸಗಣಿ ಬಾಚಿ ಹಸುಗಳಿಂದ ಹಾಲು ಕರೆಯಲು ಶುರುಮಾಡುವಾಗಲೇ ಯಾರೋ ಬಂದಂತೆ ಭಾಸವಾಯಿತು ನೋಡಿದರೆ ಅಳಿಯರು ಪಟ್ಟೆಯಂಚಿನ ಪಂಚೆ ಉಟ್ಟುಕೊಂಡು ಹೆಗಲ ಮೇಲೆ ಮೈಸೂರಿನ ಮಿರಿಮಿರಿಯ ಟವಲ್ ಹಾಕಿಕೊಂಡು, ತಮ್ಮ ತಮ್ಮ ಹೆಂಡತಿಯರ ಬಳಿ ಹೋಗಲು ನಿರತರಾದರು.

-'**ಮೊಟ್ಟೆಕೋಳಿಯೇ ಬೇಕೆಂದ ಅಳಿಯರು!**' ಪ್ರಬಂಧದಿಂದ

ಒಂದು ದಿನ ಸೈಕಲ್ ಹತ್ತಿ ಗದ್ದೆಯ ಬಳಿ ಹೊರಟಾಗ ಈ ಆರಿದ್ರ ಮಳೆ ಬೆಳ್ಗೆ ಐದರಿಂದ ಶುರುವಾಗಿದ್ದು ಹತ್ತಾದರೂ ಬಿಡದೆ 'ಪಟಪಟನೆ' ಸುರಿಯುತ್ತಲೇ ಇತ್ತು. ನಮದೊಂದು ಮಾವಿನಮರವಿತ್ತು ಯಾರಾದರೂ ಉದುರಿಸಿಕೊಂಡು ಹೋದರೋ ಎಂಬ ಭಯವೂ ನನಗಿತ್ತು. ಕೊಟ್ಟಿಗೆಯಲ್ಲಿ ಅಜ್ಜ ಗೊಣಗುತ್ತಲೇ ಇದ್ದ ಅಜ್ಜಿ ಕುಂಬಳಕಾಯಿ ಪಲ್ಯ ಅಕ್ಕಿರೊಟ್ಟಿಯ ಮಾಡಿ ಗಟ್ಟಿ ಮೊಸರು ಬಿಟ್ಟು ಕೊಟ್ಟಳು ತಿಂದವನೆ ಎಮ್ಮೆ ಅಟ್ಟಿಕೊಂಡು ಗದ್ದೆಯ ಬಳಿ ಬಂದೆ. ಏನು ಮಳೆ ಜುಯ್ಯೋ ಎಂದು ಸುರಿಯುತ್ತಲೇ ಇತ್ತು ಯಾವುದಕ್ಕೂ ಹೆದರದ ನನ್ನ ಎಮ್ಮೆಗಳು 'ಉಯ್, ವಯ್' ಎಂದು ತಮ್ಮ ರಾಜನಡೆಗಳನ್ನು ಹಾಕುತ್ತಲೇ ಇದ್ದವು. ಎಮ್ಮೆಗಳ ಮುಂದೆ ಬಿಟ್ಟುಕೊಂಡು ಸೈಕಲ್ನಲ್ಲಿ ಅವುಗಳ ಹಿಂದೆ 'ಅರೆ, ವಯ್ ಉಯ್ ಅಚ್ಟ್ ಅಚ್ ನಡೀ ವಯ್' ಎಂದೆಲ್ಲ ಉಯಿಲಿಟ್ಟು ತಲೆಗೆ ಗೋಣಿಚೀಲವನ್ನು ಕಟ್ಟಿಕೊಂಡು ನಡುಗುವ ಕೈಗಳು ಸೈಕಲ್ನ ಹ್ಯಾಂಡಲನ್ನು ಕೂಡ ಅಲುಗಾಡಿಸುತ್ತ ಒಂದು ಕಿಲೋಮೀಟರ್ ದಾಟಿದ ಮೇಲೆ ನಮ್ಮ ಗದ್ದೆ ಸಿಗುತ್ತಿತ್ತು. ವತ್ತಾರೆಯೆ ಮಳೆಯಲ್ಲಿ ಎದ್ದು ಗುಂಡಣ್ಣ ಮತ್ತು ಅವನ ಹೆಂಡತಿ ಏನೋ ಮಾಡುವಂತೆ ತೋರಿತು. ಹತ್ತಿರ ಸಮೀಪಿಸುತ್ತಾ ಹೋದಂತೆ 'ಥೂ! ಕಿತ್ಹೋದ ಮಗ್ನೆ, ನಿನ್ ಮನೆ ಹಾಳಾಗ, ನಿನ್ ಮನೆ ಹಾಳಾಗ' ಎಂದು ಕಿತ್ತಾಡುತ್ತಿದ್ದರು. ಒಂದೆರಡು ನಿಮಿಷ ನಿಂತುಕೊಂಡು ನೋಡಿದವನು 'ಯಾರ ಮನೆ ಹಾಳಾಗಬೇಕ್ರಯ್ಯಾ' ಎಂದೆ.

-'ಆದ್ರೆ ಆರಿದ್ರ, ಇಲ್ಲಂದ್ರೆ ದರಿದ್ರ!' ಪ್ರಬಂಧದಿಂದ

ಮಿಂಚುಳ್ಳಿ ಪ್ರಕಾಶನ

₹ 150/-

G Pay accepted here
Minchulli Sahitya Patrike
ISBN 978-81-965798-9-0
9 788196 579890
ಮಿಂಚುಳ್ಳಿ ಸಾಹಿತ್ಯ ಪತ್ರಿಕೆ https://minchulli.com

ಮಳೆ ಪ್ರಬಂಧಗಳು

ಸೂರ್ಯಕೀರ್ತಿ

# ಮಳೆ
## ಪ್ರಬಂಧಗಳು



ಸೂರ್ಯಕೀರ್ತಿ

ಮಿಂಚುಳ್ಳಿ ಪ್ರಕಾಶನ